# ಧರ್ಮ ಮತ್ತು ಪ್ರೇಮ

ಮಹಾಭಾರತದ ಆರಂಭದಲ್ಲಿ ವಿದುರನು ಹಸ್ತಿನಾವತಿಯ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವ ಮುನ್ನ ಭೀಷ್ಮನಲ್ಲಿಗೆ ಬಂದು ಆಶೀರ್ವದಿಸಲು ಕೋರಲು ಭೀಷ್ಮನು ವಿದುರನಿಗೆ ಧರ್ಮ ಮತ್ತು ಪ್ರೇಮಗಳ ಬಗ್ಗೆ ಅರಿವನ್ನುಂಟು ಮಾಡುವ ಮಾತುಗಳನ್ನಾಡುತ್ತಾನೆ. 'ನೀನು ಹಸ್ತಿನಾವತಿಯ ದೊರೆಗಳಿಗೆ ಬಂಧು. ಅಲ್ಲಿ ಧರ್ಮವೇ ಮುಖ್ಯವಾಗಿರಬೇಕೇ ಹೊರತು ಪ್ರೇಮವಲ್ಲ. ಧರ್ಮವೆಂಬುದು ಸೂರ್ಯನಿದ್ದ ಹಾಗೆ. ಅದು ಶಾಶ್ವತ ಮೌಲ್ಯ, ಸತ್ಯ. ಅದು ನೀತಿ– ನಿಯತಿಯ ಮೇಲೆ ನಿಂತಿರುತ್ತದೆ. ಪ್ರೇಮವೆಂಬುದು ಚಂದ್ರನಿದ್ದ ಹಾಗೆ. ವಿಕಾಸ ಮತ್ತು ಕುಂದುಗಳು ಅದರ ನಿಯತಿ. ಪ್ರೇಮವೆಂಬುದು ವ್ಯಕ್ತಿ ವ್ಯಕ್ತಿಗಳ ನಡುವೆ, ಸಮಯ ಸಂದರ್ಭಗಳಿಗನುಗುಣವಾಗಿ ಭಾವನೆಗಳ ಒತ್ತಡಕ್ಕೆ ಒಳಗಾಗುತ್ತದೆ. ಅದರಲ್ಲಿ ಬೆಳಕು ಮಂದವಾಗುತ್ತಾ ಅಥವಾ ಕತ್ತಲು ಬೆಳಕಾಗುತ್ತಾ ಸ್ಥಿರತೆಯನ್ನು ಕಾಯ್ದುಕೊಳ್ಳಲು ವಿಫಲವಾಗುತ್ತದೆ. ಅಂದರೆ ಆ ಭಾವ ಒತ್ತಡಗಳ ನಡುವೆ ಅಧಿಕಾರ ಸ್ಥಾನದಲ್ಲಿರುವವರು ತೆಗೆದುಕೊಳ್ಳುವ ತೀರ್ಮಾನಗಳು ದಾರಿ ತಪ್ಪುವ ಸಾಧ್ಯತೆ ಇರುತ್ತದೆ. ಆದುದರಿಂದ ಸದಾ ಸತ್ಯವೆ ಆಗಿರುವ ಧರ್ಮ ನಿನ್ನ ನಡೆಯಾಗಿರಲಿ' ಎಂದು ತಿಳಿಹೇಳುತ್ತಾನೆ.

ಇಲ್ಲಿ ಭೀಷ್ಮನು ಹೇಳುವ 'ಧರ್ಮ ಮತ್ತು ಪ್ರೇಮ'ಗಳು ಸಮಕಾಲೀನ ಸಂದರ್ಭದಲ್ಲಿ ವ್ಯಾಖ್ಯಾನಗೊಳ್ಳುತ್ತಿರುವ ಮತ್ತು ಅನುಷ್ಠಾನಗೊಳ್ಳುತ್ತಿರುವ ಬಗೆಯನ್ನು ವಿಶ್ಲೇಷಿಸಬೇಕು. ಭೀಷ್ಮನ ಮಾತಿನ 'ಧರ್ಮ' ಇಂದು ಆಚರಿಸುತ್ತಿರುವ ಮತೀಯತೆ ಮತ್ತು ಅದರ ಪೂರಕ ವಿಧಿ ವಿಧಾನಗಳಲ್ಲ. ಅದು ಸತ್ಯಮಾರ್ಗದಲ್ಲಿ ನಡೆಯುವ ಜೀವನ ವಿಧಾನ. ಅನೀತಿ ಮತ್ತು ದುಷ್ಟ ಮಾರ್ಗಗಳನ್ನು ವಿರೋಧಿಸುವಂಥದ್ದು; ಒಳ್ಳೆಯತನವನ್ನು ಪೋಷಿಸುವಂಥದ್ದು. ಅದು ಸೂರ್ಯ ಪ್ರಕಾಶದಂತೆ ಜೀವಪರವಾದದ್ದು ಮತ್ತು ಉಬ್ಬರವಿಳಿತಗಳಿಲ್ಲದೆ ಸದಾ ಒಂದೇ ನೆಲೆಯಲ್ಲಿರುವಂಥದ್ದು. ಸದಾ ನ್ಯಾಯಪರವೂ ನಿಷ್ಕಾಮವೂ ಸ್ವಾರ್ಥರಹಿತವೂ ಆಗಿರುವಂಥದ್ದು.

'ಪ್ರೇಮ'ವೆಂಬ ಮಾತಿನ ಅರ್ಥ ರಾಗದ್ವೇಷಗಳಿಂದ ಕೂಡಿರುವಂಥದ್ದು. ಮುಖ್ಯವಾಗಿ ಆಡಳಿತಗಾರನಿಗೆ ರಕ್ತಸಂಬಂಧದ ಮೋಹವಿರಬಾರದು. ವಿದುರನಿಗೆ ದೃತರಾಷ್ಟ್ರನೂ ಪಾಂಡುವೂ ಸೋದರರಾಗಬೇಕು; ಒಂದೇ ತಂದೆಗೆ ಜನಿಸಿದ ಮಕ್ಕಳಾದ್ದರಿಂದ ಸಹಜವಾಗಿ ಈ 'ಪ್ರೇಮ'ವೆಂಬ ಮೋಹಕ್ಕೆ ಮತ್ತು ಅದರ ಆಧಾರಿತ ಭಾವನೆಗಳ ಏರಿಳಿತಕ್ಕೆ ಒಳಗಾಗುವ ಸಾಧ್ಯತೆಯಿರುತ್ತದೆ. ಆದುರಿಂದ ಭೀಷ್ಮನು 'ಪ್ರೇಮ'ದ ಬಗ್ಗೆ ಲಘುವಾಗಲು ವಿದುರನಿಗೆ ತಿಳಿಸುತ್ತಾನೆ.

ಈಗ 'ಪ್ರೇಮ'ವೆಂಬುದು ಅರ್ಥ ವಿಸ್ತರಿಸಿಕೊಂಡು ಅಥವಾ ಅರ್ಥಾಂತರಗೊಂಡು ಹೆಣ್ಣು ಗಂಡಿನ ಸಂಬಂಧವನ್ನು ಹೆಚ್ಚಾಗಿ ಸೂಚಿಸುತ್ತದೆ. ಮಹಾಭಾರತದಲ್ಲಿ ಅದು ರಕ್ತಸಂಬಂಧ– ಸೋದರ ಸಂಬಂಧಗಳ ಮೇಲೆ ಹೆಚ್ಚಿನ ಒತ್ತನ್ನು ನೀಡುತ್ತದೆ. ಆದರೂ ವತರ್ಮಾನದ ಗಂಡು ಹೆಣ್ಣಿನ ಸಂಬಂಧದಿಂದ ಉಂಟಾಗುವ ಸಂತಾನದ ವ್ಯಾಮೋಹವನ್ನು ಮತ್ತು ಆ ಸಂತಾನವನ್ನು ಉದ್ಧಾರ ಮಾಡ ಹೊರಡುವ ರೀತಿ ರಿವಾಜುಗಳನ್ನು ಗಮನಿಸಿದಾಗ ಭೀಷ್ಮನ ಮಾತಿನ ಮೂಲಾರ್ಥ ಜೀವಂತವಾಗಿರುವುದನ್ನು ಅರ್ಥ ಮಾಡಿಕೊಳ್ಳಬಹುದು. ಇಂದಿನ ನಮ್ಮ ರಾಜಕಾರಣ ಮತ್ತು ಅಧಿಕಾರಿಶಾಹಿತನಗಳು 'ಧರ್ಮ'ಕ್ಕಿಂತ ಮಿಗಿಲಾಗಿ ಈ 'ಪ್ರೇಮ'ವೆಂಬ ಚಂದ್ರನಿಯತಿ ಮಾಯೆಗೆ ಒಳಗಾಗಿ ಬದುಕುತ್ತಿರುವುದನ್ನು ನಾವು ಗಮನಿಸಸಬೇಕು. ಶಾಶ್ವತ ಕರ್ಮವಾಗಬೇಕಾದ ಪ್ರಜಾಪಾಲನೆ, ಸಾಮಾಜಿಕ ನ್ಯಾಯವನ್ನು ನೀಡುವಿಕೆ, ಲಿಂಗ ಸಮಾನತೆಯ ದೃಷ್ಟಿ– ಇಂದು ಕಡಿಮೆಯಾಗಿದೆ. ಅಧಿಕಾರವಿರುವುದು ನಮ್ಮ ಕುಟುಂಬದ– ರಕ್ತಸಂಬಂಧಗಳ ಅಭಿವೃದ್ಧಿಗಾಗಿ, ಅವರ ಸುಖ ಸಾಧನಗಳನ್ನು ಹೆಚ್ಚಿಸುವುದಕ್ಕಾಗಿ ಎಂಬ ಮರೀಚಿಕೆಯ ಬೆನ್ನು ಹತ್ತಿ ನಮ್ಮ ರಾಜಕಾರಣ ಮತ್ತು ಆಡಳಿತಾಂಗಗಳು ಸಾಗುತ್ತಿರುವುದು ವಿಷಾದವನ್ನುಂಟು ಮಾಡುತ್ತದೆ.

ಭೀಷ್ಮನು ಧರ್ಮ ಮತ್ತು ಪ್ರೇಮಗಳ ಬಗ್ಗೆ ಒಂದು ಸಾರ್ವಕಾಲಿಕ ವ್ಯಾಖ್ಯಾನ ಮಾಡಿರುವಂತೆ ಕಾಣುತ್ತದೆ. ಆದರೆ ಭೀಷ್ಮ ಹೇಳುವ 'ಧರ್ಮ' ಅರ್ಥಾಂತರಗೊಂಡು 'ಮತ'ವೆಂಬ ಅರ್ಥದಲ್ಲಿ ವ್ಯಾಖ್ಯೆಗೊಳ್ಳುತ್ತದೆ. ಭೀಷ್ಮನ 'ಧರ್ಮ' ಮರೆಯಾಗಿ, ಅವನು ಯಾವುದನ್ನು ಬದುಕಿನ ಗುರಿಯಾಗಿಟ್ಟುಕೊಳ್ಳುವುದು ತಪ್ಪು ಎಂದಿದ್ದನೋ ಆ ರಕ್ತ ಸಂಬಂಧದ ಮೋಹ ಅಧಿಕವಾಗಿ ನಮ್ಮ ಬದುಕನ್ನು ವ್ಯಾಪಿಸಿಕೊಂಡಿದೆ. ಇದರಿಂದಾಗಿ ಸಾಮಾಜಿಕ ಸ್ವಾಸ್ಥ್ಯ ಕದಡಿದೆ; ಬದುಕಿನಲ್ಲಿ ಅಸಮಾನತೆ, ಅಸಮಾಧಾನ, ಮನೋಭಾವ, ದ್ವೇಷ ಅಸೂಯೆಗಳು ಅಧಿಕವಾಗುತ್ತಿವೆ.

ಭೀಷ್ಮನು ಅಧಿಕಾರ ನಡೆಸುವುದರ ಬಗ್ಗೆ ಅಂದು ಚಿರ ಸತ್ಯವೊಂದನ್ನು ಬೆಳಕನ್ನು ನಮಗೆ ತಿಳಿಸಿದ್ದಾನೆ. ಅದರಲ್ಲಿ ರಾಜಕಾರಣದ ಮರ್ಮವಿದೆ. ಅದನ್ನು ಅರ್ಥಮಾಡಿಕೊಳ್ಳುವುದರಲ್ಲಿ ಇತಿಹಾಸವೂ ವರ್ತಮಾನವೂ ವಿಫಲವಾಗಿದೆ.

**–ಶಿಕಾಕು**

## ಮಾತೇ ಮುತ್ತು

★ ಪ್ರತಿದಿನ ಬೆಳಿಗ್ಗೆ ಒಂದು ತಾಸು ನಿಮ್ಮ ವೈಯಕ್ತಿಕ ಬೆಳವಣಿಗೆಗೆ ಮೀಸಲಿಡಿ. ಧ್ಯಾನ, ಯೋಗ, ವ್ಯಾಯಾಮ, ಆ ದಿನ ಮಾಡಬೇಕಾದ ಕೆಲಸ, ಬೇರೆಯವರಿಂದ ಮಾಡಿಸಬೇಕಾದ ಹಾಗೂ ಅವರಿಗೆ ವಹಿಸಬೇಕಾದ ಕೆಲಸಗಳ ಬಗ್ಗೆ ಚಿಂತಿಸಿ.

–ಪು.ತಿ.ನ.

★ ಹಳೆಯ ಯೋಚನೆಗಳಿಗೆ ಸಮಯ ಹಾಳು ಮಾಡುವುದಕ್ಕಿಂತ ಹೊಸ ಹೊಸ ಆಲೋಚನೆಗಳಿಗೆ ಸಮಯ ಕೊಡುವುದು ಶ್ರೇಯಸ್ಕರ.

–ಬಿ.ಎಂ.ಶ್ರೀ.

★ ಹೆಣ್ಣಿನ ಮೈಮೇಲಿನ ಆಭರಣ ಆಕೆಯ ಪತಿಯ ಶಾಂತಚಿತ್ತತೆಯ ಬೆಲೆ.

–ತ್ರಿವೇಣಿ

★ ಪ್ರಪಂಚ ಅತ್ಯಂತ ಆಶ್ಚರ್ಯ ವಸ್ತುಗಳಿಂದ ತುಂಬಿದೆ. ಆದರೆ ಮನುಷ್ಯನಂಥ ಆಶ್ಚರ್ಯದ ವಸ್ತು ಬೇರಿಲ್ಲ!

–ಹಾ.ಮಾ.ನಾಯಕ

★ ಹಣತೆ ಹಚ್ಚುತ್ತೇನೆ ನಾನು, ಕತ್ತಲೆಯನ್ನು ದಾಟುತ್ತೇನೆ ಎಂಬ ಭ್ರಮೆಯಿಂದಲ್ಲ. ಇರುವಷ್ಟು ಹೊತ್ತು ನಿನ್ನ ಮುಖ ನಾನು, ನನ್ನ ಮುಖ ನೀನು ನೋಡಬಹುದೆಂಬ ಒಂದೇ ಆಸೆಯಿಂದ.

–ಜಿ.ಎಸ್.ಶಿವರುದ್ರಪ್ಪ

★ ಕನ್ನಡವನ್ನು ಕಲಿಸುವವರಿಗೆ ಕನ್ನಡ ನುಡಿಯ ಅರಿವಿಲ್ಲದಿರುವುದಕ್ಕೆ ಅವರು ಸಂಸ್ಕೃತ ಕಲಿಯದಿರುವುದೇ ಕಾರಣ.

–ಎಸ್.ಎಲ್.ಭೈರಪ್ಪ

★ ಕನ್ನಡವನ್ನು ಸರಿಯಾಗಿ ತಿಳಿಯಲು ಕನ್ನಡವನ್ನೇ ಸರಿಯಾಗಿ ಕಲಿತುಕೊಳ್ಳಬೇಕಲ್ಲದೆ, ಸಂಸ್ಕೃತವನ್ನಲ್ಲ.

–ಡಿ.ಎನ್.ಶಂಕರಬಟ್

★ ಜಿಪುಣನಿಗೆ ಸ್ನೇಹಿತರು ಇರುವುದಿಲ್ಲ. ಎಲ್ಲರೂ ಅವನನ್ನು ತಿರಸ್ಕಾರದಿಂದ ನೋಡುತ್ತಾರೆ.

–ಪ್ರೇಮ್‌ಚಂದ್

★ ಜವಾಬ್ದಾರಿ ಸ್ಥಾನಗಳಲ್ಲಿದ್ದೂ ಕೆಲವರು ತಮ್ಮ ಪಾಡಿಗೆ ತಾವು ಸುರಕ್ಷಿತವಾಗಿರಲು ಬಯಸುತ್ತಾರೆ. ಅಂತಹವರನ್ನೇ ಕೆಲವರು ಒಳ್ಳೆಯವರು ಎಂದೂ ಕರೆಯುತ್ತಾರೆ. ಅದು ಸರಿಯಲ್ಲ. ಅಂತಹ ಒಳ್ಳೆಯತನದಿಂದ ಸಮಾಜಕ್ಕೆ ಏನೂ ಪ್ರಯೋಜನ ಇಲ್ಲ.

–ಅನುಭವಾಮೃತ

★ ಬೇರೆಯವರ ಸಂಪತ್ತನ್ನು ಅಪಹರಿಸುವುದು, ಹಿತೈಷಿಗಳು ಮತ್ತು ಸಜ್ಜನರಲ್ಲಿ ಅವಿಶ್ವಾಸ– ಜೀವನವನ್ನು ನಾಶ ಮಾಡುತ್ತವೆ.

–ವಾಲ್ಮೀಕಿ

★ ದೈನ್ಯತೆ ಅನುಕರಣೆಗೆ ಯೋಗ್ಯವಾದದ್ದು. ದೈನ್ಯತೆ ದೌರ್ಬಲ್ಯವಲ್ಲ. ಅದು ಗಟ್ಟಿತನದ ಇನ್ನೊಂದು ಮುಖ. ವಿನಯಶೀಲರು ಎಲ್ಲರನ್ನೂ ಗೌರವದಿಂದ ಕಾಣುತ್ತಾರೆ.

–ಕೃಷ್ಣಮೂರ್ತಿ ಪುರಾಣಿಕ

★ ಜಗತ್ತಿನಲ್ಲಿ ಪವಿತ್ರ ವಸ್ತು ಇದೆ ಎನ್ನುವುದಾದರೆ ಅದು ದೇಹ ಮಾತ್ರ.

–ಮೀರಾಬಾಯಿ